

# ಹಾಡು
# ಬೇಲಿಯ ಮೇಲೆ ಹಾರಾಡಿ

1

ಬೇಲಿ ಮೇಲೆ ಹಾರಾಡಿ
ಹಾಗೆ ಹೀಗೆ ಓಲಾಡಿ
ಕೆಂಪು ಟೋಪಿ ತೂರಾಡಿ
ಹೇಳುವೆ ಏನಾ ಎಲೇ ಕೋಳಿ

ಕೊಕ್ ಕೊಕ್ ಕೊಕ್ ಕೊಕ್
ಕೊಕ್ ಕೊಕ್ ಕೊಕ್ ಕೊಕ್ ಕೂಗೇಳು

ಬೆಳ್ಳಂ ಬೆಳಕು ಈಗಾಯ್ತು
ಹಳ್ಳಿಯೆಲ್ಲಾ ಹೊನ್ನಾಯ್ತು
ಏಳಿ ಏಳಿ ಎದ್ದೇಳಿ
ಹುಂಜ ಹಳ್ಳಿಯ ಗಡಿಯಾರ ॥3॥ ಸಲ



## ಹಾಡು
## ಗಾಂಧಿ ತಾತ

**2**

ಎಡಗೈಯಲ್ಲಿ ರಾಟೆ
ಬಲಗೈಯಲ್ಲಿ ಗೀತೆ
ಹಿಡಿದವರಾರು ಗೊತ್ತೆ ?
ಅವರೇ ನಮ್ಮ ಗಾಂಧಿ
ಪರಮ ಪೂಜ್ಯ ಗಾಂಧಿ
ಶ್ರೀ ಮಹಾತ್ಮ ಗಾಂಧಿ ||1||

ಕೈಯಲ್ಲೊಂದು ಚಕೋಲು
ಅವರಿಗಿಲ್ಲ ಸೋಲು
ಅಂತಹವರ್‍ಯಾರು ಗೊತ್ತೆ ?
ಅವರೇ ನಮ್ಮ ಗಾಂಧಿ
ಪರಮ ಪೂಜ್ಯ ಗಾಂಧಿ
ಶ್ರೀ ಮಹಾತ್ಮ ಗಾಂಧಿ ||2||

ಮಕ್ಕಳಿಗೆಲ್ಲ ತಾತ ವಿಶ್ವಕ್ಕೆಲ್ಲಾ ಧಾತ
ಅಂತಹವರ್‍ಯಾರು ಗೊತ್ತೇ ?
ಅವರೇ ನಮ್ಮ ಗಾಂಧಿ
ಪರಮ ಪೂಜ್ಯ ಗಾಂಧಿ
ಶ್ರೀ ಮಹಾತ್ಮ ಗಾಂಧಿ ||3||



# ಹಾಡು
# ಚಂದಮಾಮ

**3**

ಚಂದ ಮಾಮ ಬಾರಯ್ಯ
ನಮ್ಮ ಮನೆಗೆ ಬಾರಯ್ಯ
ಹಾಲು ಸಕ್ಕರೆ ಕೂಡಿಸಿ ಕೊಡುವೆ
ಕುಡಿಯಲು ಬೆಳ್ಳಿಯ ಬಟ್ಟಲು ಕೊಡುವೆ ॥1॥

ಸಕ್ಕರೆ ಕಡ್ಡಿ ತರ್ತೀನಿ
ಮಿಕ್ಕರೆ ನಿನಗೂ ಕೊಡ್ತೀನಿ
ಇಬ್ಬರು ಸೇರಿ ತಿನ್ನೋಣ
ಇಬ್ಬರು ಕೂಡಿ ಆಡೋಣ ॥2॥

ಎಲ್ಲಿಗೆ ಹೋದ್ರು ಬರ್ತೀಯಾ
ಅಲ್ಲೇ ದೂರದಲ್ಲಿರ್ತೀಯಾ
ಹಿಂದೆ ಹಿಂದೆ ಬರ್ತೀಯಾ
ಎಲ್ಲಂದ್ರೆ ಅಲ್ಲೇ ನಿಲ್ತೀಯಾ ॥3॥



# ಹಾಡು
## ಅಂಬಕ ಜಂಬಕ

4

ಅಂಬಕ ಆಹಾ ಜಂಭಕ
ಅಂಬಕ ಜಂಭಕ ದಿಂಬಕದಿಂದ
ಬರ್ತಾಳೆ ರತುನಾ ತಿರುಗುಸ್ತಾಳೆ ಮೈಯನ್ನ ॥ಪ॥

ಕೈಯಿಗೆ ಕೈಬಳೆ ಹಾಕವಳೇ ರತುನಾ
ಹಾಕವಳೇ ರತುನಾ ತಿರಿಗಿಸುತ್ತಾಳೆ ಕೈಯನ್ನಾ ।.....

ಕಾಲಿಗೆ ಕಾಲ್ಗೆಜ್ಜೆ ಹಾಕವಳೇ ರತುನಾ
ಹಾಕವಳೇ ರತುನಾ ತಿರಿಗುಸ್ತಾಳೆ ಕಾಲನ್ನ ।

ಸೊಂಟಕ್ಕೆ ಸೊಂಟಪಟ್ಟಿ ಹಾಕವಳೇ ರತುನಾ
ಹಾಕವಳೇ ರತುನಾ ತಿರಿಗುಸ್ತಾಳೆ ಸೊಂಟನಾ ।

ಕತ್ತಿಗೆ ಮುತ್ತಿನ ಸರ ಹಾಕವಳೇ ರತುನಾ
ಹಾಕವಳೇ ರತುನಾ ತಿರಿಗುಸ್ತಾಳೆ ಕತ್ತನ್ನ ॥ಪ॥



# ಕಥೆ
# ಚಿನ್ನದ ಮೊಟ್ಟೆಯಿಡುವ ಕೋಳಿ

**5**

ಒಬ್ಬ ರೈತನಿದ್ದ ಅವನು ಒಂದು ಕೋಳಿ ಸಾಕಿದ್ದ. ಅದು ಬೆಳೆದು ದೊಡ್ಡದಾಯ್ತು. ಅವನ ಅದೃಷ್ಟಕ್ಕೆ ಆ ಕೋಳಿ ದಿನಾ ಒಂದು ಚಿನ್ನದ ಮೊಟ್ಟೆ ಇಡತೊಡಗಿತು.





ಅವನಿಗೆ ಒಂದು ಕೆಟ್ಟ ಆಲೋಚನೆ ಬಂತು. ದಿನಾ ಒಂದು ಮೊಟ್ಟೆ ಮಾರಿ ಜೀವಿಸುವುದು ಬೇಸರವೆನಿಸಿತು. ಕೋಳಿಯ ಹೊಟ್ಟೆ ಕೊಯ್ದರೆ ಎಲ್ಲಾ ಚಿನ್ನದ ಮೊಟ್ಟೆಗಳೂ ಒಟ್ಟಿಗೆ ಸಿಗುತ್ತವೆ ಎನಿಸಿತು.

ಕೊಯ್ದು ನೋಡುತ್ತಾನೆ. ಅಲ್ಲೇನಿದೆ ?



ಮಾಂಸ ಕರಳು ಬಿಟ್ಟು ಕೋಳಿಯೂ ಹೋಯಿತು, ಚಿನ್ನದ ಮೊಟ್ಟೆಯೂ ಹೋಯಿತು.



# ಕಥೆ
# ಮೋಸ ಹೋದ ಕಳ್ಳರು

**6**



ಕಳ್ಳರು ಒಂದು ದಿನ ಕಳ್ಳತನ ಮಾಡಲೆಂದು ತೆನಾಲಿ ರಾಮಕೃಷ್ಣನ ಮನೆಯ ಹಿಂಭಾಗದ ಹಿತ್ತಲಲ್ಲಿ ಅಡಗಿ ಕುಳಿತರು. ರಾಮಕೃಷ್ಣ ಎಂದಿನಂತೆ ಮನೆಗೆ ಬಂದನು. ಹಿತ್ತಲಲ್ಲಿ ಯಾರೋ ಅಡಗಿರುವ ಬಗ್ಗೆ ಸಂಶಯ ಬಂತು. ತಕ್ಷಣ ಹೆಂಡತಿಗೆ ಜೋರಾಗಿ ''ಏ ಏನೇ ಈಗ ನಗರದಲ್ಲಿ ಕಳ್ಳರ ಹಾವಳಿ ಹೆಚ್ಚಾಗಿದೆ. ನಾವು ಜಾಗರೂಕರಾಗಿರಬೇಕು. ನಮ್ಮ ಸಂಪತ್ತನ್ನೆಲ್ಲ ಪೆಟ್ಟಿಗೆಯಲ್ಲಿ ತುಂಬಿ ಹಿತ್ತಲ ಬಾವಿಯಲ್ಲಿ ಹಾಕೋಣ. ಕಳ್ಳರ ಹಾವಳಿ ಕಡಿಮೆಯಾದ ಮೇಲೆ ತೆಗೆದುಕೊಂಡರಾಯಿತು'' ಎಂದನು. ಇಬ್ಬರೂ ಸೇರಿ ಒಂದು



ಮುರುಕು ಪೆಟ್ಟಿಗೆಯಲ್ಲಿ ಮಡಕೆ ಚೂರು, ಕಲ್ಲುಗಳನ್ನು ತುಂಬಿದರು. ಭಾರವಾಗಿದ್ದ ಅದನ್ನು ಕಷ್ಟಪಟ್ಟು ಬಾವಿಗೆ ಹಾಕಿದರು. ಅದನ್ನು ನೋಡಿದ ಕಳ್ಳರಿಗೆ ಬಹಳ ಸಂತೋಷವಾಯಿತು. ಇತ್ತ ರಾಮಕೃಷ್ಣನ ಹೆಂಡತಿಯನ್ನು ಒಳಗೆ ಮಲಗಿಸಿ ತಾನು ಹಿತ್ತಲಿನ ಬಾಳೆಯ ಗಿಡದ ಮರೆಯಲ್ಲಿ ಅಡಗಿ ಕುಳಿತನು. ಕಳ್ಳರು ಬಾವಿಯ ಬಳಿಗೆ ಬಂದು ನೋಡಿದರು. ಒಳಗೆ ಇಳಿಯುವ ಧೈರ್ಯ ಯಾರಿಗೂ ಇರಲಿಲ್ಲ ಅವರಲ್ಲೊಬ್ಬನು ''ನಾವು ಬಾವಿಯಲ್ಲಿದ್ದಾಗ ರಾಮಕೃಷ್ಣನು ಬಂದರೆ ನಾನು ಸಾಯುವುದು ನಿಜ. ಬಾವಿಯಲ್ಲಿ ಆಳುದ್ದ ನೀರಿದೆ. ನೀರನ್ನೆಲ್ಲ ಸೇದಿ ಹಾಕಿ ಪೆಟ್ಟಿಗೆ ತೆಗೆದುಕೊಂಡು ಹೋಗೋಣ'' ಎಂದನು. ಅದನ್ನು ಎಲ್ಲರೂ ಒಪ್ಪಿ ನೀರು ಸೇದಲಾರಂಭಿಸಿದರು. ಸರತಿಯಂತೆ ನೀರು ಸೇದಿ ಸೇದಿ ಸುಸ್ತಾದರೂ ನೀರು ಖಾಲಿಯಾಗಲಿಲ್ಲ. ಬೆಳಗಾಗುವುದಕ್ಕೆ ಇನ್ನೂ ಮೂರು ನಾಲ್ಕು ಗಂಟೆಯಿದೆ ಎಂದು ಬೇಗ ಬೇಗ ಸೇದಲಾರಂಭಿಸಿದರು. ನೀರು ಸೇದಿ ಸುಸ್ತಾದ ಕಳ್ಳರು ಕುಳಿತರು ಎಲ್ಲರೂ ಹಸಿವಿನಿಂದ



ಬಳಲತೊಡಗಿದ್ದರು. ಅವಳ ಗೋಳನ್ನು



ನೋಡಲಾರದ ರಾಮಕೃಷ್ಣ ''ಅಯ್ಯಾ ಕಳ್ಳ ಜನರೆ ಇನ್ನೂ ಹೆಚ್ಚು ನೀರು ಹಾಕಿದರೆ ಬಾಳೇ ಸಸಿಗಳು ಕೊಳೆಯುತ್ತವೆ ಸಾಕು'' ಎಂದು ಕೂಗಿದನು. ಅವನ ಸ್ವರ ಕೇಳಿದೊಡನೆ ಕಳ್ಳರು ಓಡಿದರು. ರಾಜನು ಈ ವಿಚಾರವನ್ನು ಕೇಳಿ ಅವನ ಜಾಣತನವನ್ನು ಮೆಚ್ಚಿದನು.

| | | |
|---|---|---|
| | ಕಥೆ | 7 |

# ತೋಳ ಬಂತು ತೋಳ



ಒಬ್ಬ ಹುಡುಗ ಬಯಲಿನಲ್ಲಿ ಕುರಿ ಮೇಯಿಸುತ್ತಿದ್ದನು. ಅವನಿಗೆ ಏಕೋ ಏನೋ ಅಕ್ಕಪಕ್ಕದ ಜನರನ್ನು ಕೀಟಲೆ ಮಾಡಬೇಕೆನಿಸಿತು. ಅದಕ್ಕೆ ಸುಮ್ಮ ಸುಮ್ಮನೆ ತೋಳ ಬಂತು ತೋಳ ಎಂದು ಜೋರಾಗಿ ಕೂಗಿದನು.



ಪಕ್ಕದ ಹೊಲದಲ್ಲಿದ್ದ ರೈತರು ಕೆಲಸ ಬಿಟ್ಟು ಓಡೋಡಿ ಬಂದರು. ಹುಡುಗ ಅವರ ಅವಾಂತರ ನೋಡಿ ನಕ್ಕು ಮತ್ತೆ ಮತ್ತೆ ಇದೇ ಚಾಳಿಯನ್ನು ಮುಂದುವರಿಸಿದ. ಕೆಲ ದಿನ ಕಳೆಯಿತು. ನಿಜಯವಾಗಿಯೂ ತೋಳ ಬಂದು ಕುರಿಗಳ ಮೇಲೆ ಎಗರಿತು. ಮತ್ತೆ ಹುಡುಗ ತೋಳ ಬಂತು ತೋಳ ಎಂದು ಕೂಗಿದ.



ಇವನು ಸುಳ್ಳುಗಾರನೆಂದು ತಿಳಿದಿದ್ದ ಜನ ಇವನ ಬಳಿ ಸುಳಿಯಲಿಲ್ಲ. ತೋಳ ಕುರಿಗಳನ್ನು ತಿಂದುಹಾಕಿತು.



# ಒಗ್ಗಟ್ಟಿನಲ್ಲಿ ಬಲವಿದೆ



ಒಬ್ಬ ರೈತನಿಗೆ ನಾಲ್ಕು ಜನ ಗಂಡು ಮಕ್ಕಳಿದ್ದರು. ಅವರು ಯಾವಾಗಲೂ ಕಿತ್ತಾಡುತ್ತಿದ್ದರು. ರೈತ ಅವರಿಗೆ ಬುದ್ಧಿ ಹೇಳಿ ಹೇಳಿ ಸುಸ್ತಾದನು. ಆದರೂ ಅವರು ಕಿತ್ತಾಡುವುದನ್ನು ನಿಲ್ಲಿಸಲಿಲ್ಲ.

ಒಂದು ದಿನ ರೈತ ಕಾಡಿಗೆ ಹೋದನು. ಅಲ್ಲಿಂದ ಬರುವಾಗ ಒಂದು ಕಂತೆ ಕಡ್ಡಿಗಳನ್ನು ತಂದನು. ತನ್ನ ಮಕ್ಕಳನ್ನು ಒಬ್ಬೊಬ್ಬರಾಗಿ ಕರೆದು ಕಂತೆ ಮುರಿಯಲು ಹೇಳಿದನು. ಮಕ್ಕಳು ಕಡ್ಡಿಯನ್ನು ಚೂರು ಮಾಡಲು ಸಾಧ್ಯವಾಗಲಿಲ್ಲ. ರೈತ ಒಂದೊಂದೇ ಕಡ್ಡಿ ಮುರಿಯಲು ಹೇಳಿದನು. ಮಕ್ಕಳು ಕಡ್ಡಿಯನ್ನು ಚೂರು ಚೂರು ಮಾಡಿದರು. ರೈತ ತಕ್ಷಣ ಹೇಳಿದನು.





ನೀವೆಲ್ಲರೂ ಒಂದಾಗಿದ್ದರೆ ನಿಮ್ಮನ್ನು ಯಾರೂ ನಾಶ ಮಾಡಲಾರರು. ಜಗಳವಾಡಿಕೊಂಡಿದ್ದರೆ ನಾಶ ಮಾಡುವುದು ಸುಲಭ. ಮಕ್ಕಳಿಗೆ ಎಲ್ಲವೂ ಮನವರಿಕೆ ಯಾಯಿತು. ಅಂದಿನಿಂದ ಜಗಳ ವಾಡುವುದನ್ನು ನಿಲ್ಲಿಸಿ ಎಲ್ಲರೂ ಒಗ್ಗಟ್ಟಿನಿಂದ ಜೀವನ ಸಾಗಿಸಿದರು.





## ಸರಳ ಸಂಭಾಷಣೆ

**9**

# ಮೊಸಳೆ ಮತ್ತು ಜಿಂಕೆ

ನಿರೂಪಕ : ಒಂದು ಕಾಡಿನಲ್ಲಿ ಎಲ್ಲಾ ರೀತಿಯ ಪ್ರಾಣಿಗಳು ಇದ್ದವು. ಅಲ್ಲಿ ಒಂದು ಕೊಳವಿತ್ತು. ಆ ಕೊಳದಲ್ಲಿ ಒಂದು ದೊಡ್ಡ ಮೊಸಳೆಯಿತ್ತು. ಅದು ನೀರು ಕುಡಿಯಲು ಬರುವ ಎಲ್ಲಾ ಪ್ರಾಣಿಗಳನ್ನು ಹಿಡಿದು ಕೊಲ್ಲುತ್ತಿತ್ತು. ಕಾಡಿನ ರಾಜನಾದ ಸಿಂಹವೂ ಅದಕ್ಕೆ ಹೆದರುತ್ತಿತ್ತು.

ಹಾಡು : ಒಂದಾನೊಂದು ಕಾಡು ಅದು ಪ್ರಾಣಿಗಳ ಬೀಡು।
ಕಾಡಲಿ ಒಂದು ಕೊಳವು ಕೊಳದ ತುಂಬ ಜಲವು।
ಜನ್ ಜನಕ ಜನ್, ಜನ್ ಜನಕ ಜನ್, ಜನ್ ಜನಕ ಜನ್।
ಪುಟ್ಟ ಮೊಲವು ನೆಗೆದು ಬಂದು ನೀರು ಕುಡಿಯಲು।
ಮೊಸಳೆ ಬಂದು ಬಾಯಿ ತೆಗೆದು ಮೊಲವ ತಿನ್ನಲು।
ಪ್ರಾಣಿಗಳ ಜೊತೆಗೆ ಸೇರಿ ವಿಷಯ ತಿಳಿಸಿತು.

ನಿರೂಪಕ : ಪ್ರಾಣಿಗಳು ಸಭೆ ಸೇರಿ ಸಮಸ್ಯೆಯ ಬಗ್ಗೆ ಚರ್ಚಿಸಿದವು. ಆಗ ಒಂದು ಬುದ್ದಿವಂತ ಜಿಂಕೆ ಮುಂದೆ ಬಂದು ಹೇಳಿತು.

ಜಿಂಕೆ : ಮೊಸಳೆಯನ್ನು ಸೋಲಿಸಲು ನಾನೊಂದು ಉಪಾಯ ಮಾಡಿದ್ದೇನೆ. ನನಗೆ ಅವಕಾಶ ಕೊಡಿ ಎಂದು ಜಿಂಕೆ ಪ್ರಾಣಿಗಳನ್ನು ಕೇಳಿ ಒಪ್ಪಿಗೆ ಪಡೆದು ಕೊಳದ ಬಳಿ ಹೋಯಿತು.

ಮೊಸಳೆ : ಎಲೈ ಜಿಂಕೆಯೇ ನಿನ್ನನ್ನು ಹಿಡಿದು ತಿನ್ನುತ್ತೇನೆ. ನನ್ನನ್ನು ಕಂಡರೆ ನಿನಗೆ ಹೆದರಿಕೆಯಿಲ್ಲವೆ ?

ಜಿಂಕೆ : ನಾನೇಕೆ ಹೆದರಬೇಕು. ನೀನು ನನಗೆ ಯಾವ ಲೆಕ್ಕ.

ಮೊಸಳೆ : ಹಾಗಾದರೆ ನಾವು ಯುದ್ಧ ಮಾಡೋಣ ಬಾ.

ಜಿಂಕೆ : ಆಗಲಿ ಹಗ್ಗದ ಪಂದ್ಯ ಆಡೋಣ ಯಾರು ಗೆಲ್ಲುವರೋ ನೋಡೋಣ.

ನಿರೂಪಕ : ಜಿಂಕೆ ಹಗ್ಗ ತಂದು ಪಂದ್ಯ ಪ್ರಾರಂಭಿಸಿತು. ಹಗ್ಗದ ಒಂದು ತುದಿಯನ್ನು ಮೊಸಳೆ ತನ್ನ ಹಲ್ಲಿನಿಂದ ಕಚ್ಚಿಹಿಡಿಯಿತು. ಜಿಂಕೆ ಜಾಣತನದಿಂದ ಮೊಸಳೆಗೆ ಕಾಣದಂತೆ ಹಗ್ಗದ ಇನ್ನೊಂದು ತುದಿಯನ್ನು ದೊಡ್ಡ ಮರಕ್ಕೆ ಕಟ್ಟಿ ಹಗ್ಗ ಎಳೆಯುವಂತೆ ನಟಿಸಿತು. ಮೊಸಳೆ ಹಗ್ಗವನ್ನು ಜಗ್ಗಿ ಜಗ್ಗಿ ತನ್ನ ಹಲ್ಲುಗಳನ್ನೆಲ್ಲ ಮುರಿದುಕೊಂಡು ತನ್ನ ಸೋಲನ್ನು ಒಪ್ಪಿಕೊಂಡಿತು.

ಹಾಡು : ಎಲ್ಲರು ಸೇರುತ ಕುಣಿಯೋಣ
ನಲಿಯುತ ನಲಿಯುತ ಹಾಡೋಣ
ಒಟ್ಟಿಗೆ ಕೂಡಿ ಬಾಳೋಣ.

|  | ಕ್ರಾಫ್ಟ್ | 10 |
|---|---|---|

# ಅಕ್ಷರಗಳ ಸ್ಪ್ರೆ

ಸಾಮಗ್ರಿ: ದ್ರವ ರೂಪದ ಬಣ್ಣಗಳು, ಪ್ರಾಣಿ, ಪಕ್ಷಿ ಚಿತ್ರಗಳ.

ಮಾದರಿ : ಹಲ್ಲುಜ್ಜುವ ಬ್ರೆಶ್ ಮತ್ತು ಬಿಳಿಹಾಳೆ.

ವಿಧಾನ : ಮಾದರಿಗಳನ್ನು ಒಂದು ಬಿಳಿ ಹಾಳೆಯ ಮೇಲೆ ಇಟ್ಟು ಬ್ರೆಶ್‌ನಿಂದ ಬಣ್ಣವನ್ನು ಅದ್ದಿಕೊಂಡು ಸ್ಪ್ರೇ ಮಾಡುವುದು. ನಂತರ ಹಾಳೆಯ ತುಂಬ ಸ್ಪ್ರೇ ಮಾಡಿದ ಮಾದರಿಗಳನ್ನು ತೆಗೆದರೆ ಆ ಮಾದರಿ ಆಕಾರ ಹಾಳೆಯ ಮೇಲೆ ಬೀಳುತ್ತದೆ. ಇದೇ ರೀತಿಯ ಚಟುವಟಿಕೆಯನ್ನು ಮಕ್ಕಳಿಂದ ಮಾಡಿಸುವುದು. ಸಿದ್ಧಪಡಿಸಿದ ಚಟುವಟಿಕೆಯ ಹಾಳೆಯ ಮೇಲೆ ವಿದ್ಯಾರ್ಥಿ ಹೆಸರು ಬರೆದು ಪ್ರದರ್ಶನಕ್ಕೆ ಇಡುವುದು.

# ತಾರಾನಾಥ

**11**

ಸೂಚನೆ : ಈ ಹಂತಕ್ಕೆ ಬಂದ ಮಗುವಿಗೆ T.L.M. ಕಿಟ್‌ನಲ್ಲಿರುವ ತಾರಾನಾಥ ಪ್ಲೇಟನ್ನು ನೀಡಿ ಅದನ್ನು ಬಳಪ ಅಥವಾ ಕಡ್ಡಿಯನ್ನು ಬಳಸಿ ತಿದ್ದಲು ಹೇಳುವುದು.



## ಸೀತಾಫಲ — 12

ಸೂಚನೆ : ಈ ಹಂತಕ್ಕೆ ಬಂದ ಮಗುವಿಗೆ T.L.M. ಕಿಟ್‌ನಲ್ಲಿರುವ ಸೀತಾಫಲ ಪ್ಲೇಟನ್ನು ನೀಡಿ ಅದನ್ನು ಬಳಪ ಅಥವಾ ಕಡ್ಡಿಯನ್ನು ಬಳಸಿ ತಿದ್ದಲು ಹೇಳುವುದು.





# ಚಿತ್ರ ರೈಲು

**13**















# ಅಕ್ಷರ ರೈಲು

**14**

| | |
|---|---|
|  | ರ |
| ರ | ಗ |
| ಗ | ಸ |
| ಸ | ಡ |
| ಡ | ಅ |

1



# ಚಿತ್ರವನ್ನು ಹೆಸರಿಸು

15

**ಸೂಚನೆ :**

- ಕಾರ್ಡನ್ನು ಮಕ್ಕಳಿಗೆ ತೋರಿಸಿ ಇದರಲ್ಲಿರುವ ಅರಸ, ಗರಗಸ, ಅರ, ಸರ ಚಿತ್ರಗಳನ್ನು ಹೆಸರಿಸಲು ಹೇಳುವುದು.
- ಮಕ್ಕಳು ಹೆಸರಿಸದಿದ್ದಲ್ಲಿ ಶಿಕ್ಷಕರು ಸಹಾಯ ಮಾಡುವುದು.







a

1



## ಚಿತ್ರ ಪದ

15







b

1



# ಆಕಾರ ಗುರ್ತಿಸುವ ಅಕ್ಷರ ಪಟ್ಟಿ

16

**ಸೂಚನೆ :**

- ಮೊದಲ ಅಡ್ಡಸಾಲನ್ನು ಹೊರತುಪಡಿಸಿ ಉಳಿದ ಅಕ್ಷರಗಳನ್ನು ಕತ್ತರಿಸಿ ಮಿಂಚು ಪಟ್ಟಿಗಳನ್ನು ತಯಾರಿಸಿಕೊಳ್ಳುವುದು.
- ಇದೇ ರೀತಿಯ ಕಾರ್ಡನ್ನು ಹೋಲುವಂತೆ ಖಾಲಿ ಮನೆಗಳ ಹಾಳೆ / ಬೋರ್ಡನ್ನು ತಯಾರಿಸಿ ಕೊಳ್ಳುವುದು.
- ಈ ಹಂತದ ಮಕ್ಕಳಿಗೆ ಮೊದಲ ಸಾಲಿನ ಅಕ್ಷರಗಳನ್ನು ಹೋಲುವ ಮಿಂಚುಪಟ್ಟಿಗಳನ್ನು ಜೋಡಿಸಲು ತಿಳಿಸುವುದು.

| | | | | |
|---|---|---|---|---|
| ರ | ಗ | ಸ | ದ | ಅ |
| ರ | ಗ | ಸ | ದ | ಅ |
| ರ | ಗ | ಸ | ದ | ಅ |
| ರ | ಗ | ಸ | ದ | ಅ |
| ರ | ಗ | ಸ | ದ | ಅ |




# ಅಕ್ಷರ ಬರವಣಿಗೆ

**17**



- ರಬ್ಬರ ಅಕ್ಷರವನ್ನು ವಿದ್ಯಾರ್ಥಿಗೆ ನೀಡಿ ರಬ್ಬರ್ ಅಕ್ಷರದ ಮೇಲೆ ಬರೆಯುವ ಕ್ರಮದಲ್ಲಿ ಬೆರಳಾಡಿಸುವ ಚಟುವಟಿಕೆ ಮಾಡಿಸುವುದು.
- ಬಾಣದ ಗುರುತಿನಂತೆ ಅಕ್ಷರದ ಮೇಲೆ ಬೀಜ, ಮಣಿಗಳನ್ನು ಜೋಡಿಸುವ ಚಟುವಟಿಕೆ ಮಾಡಿಸುವುದು ನಂತರ ಅಕ್ಷರ ಬರೆಯುವ ರೂಢಿ ಮಾಡಿಸುವುದು.



1



# ಅಕ್ಷರ ಬರವಣಿಗೆ

18



- ರಬ್ಬರ ಅಕ್ಷರವನ್ನು ವಿದ್ಯಾರ್ಥಿಗೆ ನೀಡಿ ರಬ್ಬರ್ ಅಕ್ಷರದ ಮೇಲೆ ಬರೆಯುವ ಕ್ರಮದಲ್ಲಿ ಬೆರಳಾಡಿಸುವ ಚಟುವಟಿಕೆ ಮಾಡಿಸುವುದು.
- ಬಾಣದ ಗುರುತಿನಂತೆ ಅಕ್ಷರದ ಮೇಲೆ ಬೀಜ, ಮಣಿಗಳನ್ನು ಜೋಡಿಸುವ ಚಟುವಟಿಕೆ ಮಾಡಿಸುವುದು ನಂತರ ಅಕ್ಷರ ಬರೆಯುವ ರೂಢಿ ಮಾಡಿಸುವುದು.
- ಈ ಅಕ್ಷರ ಹಾಗೂ ಹಿಂದೆಕಲಿತಿರುವ ಅಕ್ಷರಗಳನ್ನು ಬಳಸಿ ಪದರಚನೆ ಮಾಡಿಸುವುದು. ಉದಾ : ಗರ.






# ಅಕ್ಷರ ಬರವಣಿಗೆ

**19**



- ರಬ್ಬರ ಅಕ್ಷರವನ್ನು ವಿದ್ಯಾರ್ಥಿಗೆ ನೀಡಿ ರಬ್ಬರ್ ಅಕ್ಷರದ ಮೇಲೆ ಬರೆಯುವ ಕ್ರಮದಲ್ಲಿ ಬೆರಳಾಡಿಸುವ ಚಟುವಟಿಕೆ ಮಾಡಿಸುವುದು.
- ಬಾಣದ ಗುರುತಿನಂತೆ ಅಕ್ಷರದ ಮೇಲೆ ಬೀಜ, ಮಣಿಗಳನ್ನು ಜೋಡಿಸುವ ಚಟುವಟಿಕೆ ಮಾಡಿಸುವುದು ನಂತರ ಅಕ್ಷರ ಬರೆಯುವ ರೂಢಿ ಮಾಡಿಸುವುದು.
- ಈ ಅಕ್ಷರದ ಮತ್ತು ಹಿಂದೆ ಕಲಿತಿರುವ ಅಕ್ಷರಗಳನ್ನು ಬಳಸಿ ಪದರಚನೆ ಮಾಡಿಸುವುದು. ಉದಾ : ರಸ, ಸರ, ಗರ



1 

# ಅಕ್ಷರ ಬರವಣಿಗೆ

**20**



- ರಬ್ಬರ ಅಕ್ಷರವನ್ನು ವಿದ್ಯಾರ್ಥಿಗೆ ನೀಡಿ ರಬ್ಬರ್ ಅಕ್ಷರದ ಮೇಲೆ ಬರೆಯುವ ಕ್ರಮದಲ್ಲಿ ಬೆರಳಾಡಿಸುವ ಚಟುವಟಿಕೆ ಮಾಡಿಸುವುದು.
- ಬಾಣದ ಗುರುತಿನಂತೆ ಅಕ್ಷರದ ಮೇಲೆ ಬೀಜ, ಮಣಿಗಳನ್ನು ಜೋಡಿಸುವ ಚಟುವಟಿಕೆ ಮಾಡಿಸುವುದು ನಂತರ ಅಕ್ಷರ ಬರೆಯುವ ರೂಢಿ ಮಾಡಿಸುವುದು.
- ಈ ಅಕ್ಷರ ಹಾಗೂ ಹಿಂದೆಕಲಿತಿರುವ ಅಕ್ಷರಗಳನ್ನು ಬಳಸಿ ಪದರಚನೆ ಮಾಡಿಸುವುದು. ಉದಾ : ರಸ, ಸರ, ಗರ.



1

# ಅಕ್ಷರ ಬರವಣಿಗೆ

**21**



- ರಬ್ಬರ ಅಕ್ಷರವನ್ನು ವಿದ್ಯಾರ್ಥಿಗೆ ನೀಡಿ ರಬ್ಬರ್ ಅಕ್ಷರದ ಮೇಲೆ ಬರೆಯುವ ಕ್ರಮದಲ್ಲಿ ಬೆರಳಾಡಿಸುವ ಚಟುವಟಿಕೆ ಮಾಡಿಸುವುದು.
- ಬಾಣದ ಗುರುತಿನಂತೆ ಅಕ್ಷರದ ಮೇಲೆ ಬೀಜ, ಮಣಿಗಳನ್ನು ಜೋಡಿಸುವ ಚಟುವಟಿಕೆ ಮಾಡಿಸುವುದು ನಂತರ ಅಕ್ಷರ ಬರೆಯುವ ರೂಢಿ ಮಾಡಿಸುವುದು.
- ಈ ಅಕ್ಷರ ಹಾಗೂ ಹಿಂದೆಕಲಿತಿರುವ ಅಕ್ಷರಗಳನ್ನು ಬಳಸಿ ಪದರಚನೆ ಮಾಡಿಸುವುದು. ಉದಾ : ರಸ, ಸರ, ಗರ, ಅರ.

